ಇದು ರಾಷ್ಟ್ರೀಯ ನೀತಿಯಾಗಿರುವುದರಿಂದ ಈ ಎಲ್ಲ ನಿಯಮಗಳೂ ಕೂಡ ಆ ಒಂದು ಚೌಕಟ್ಟಿನಲ್ಲಿ ಬರುತ್ತದೆ

ಪಿ.ಜಿ.ಆರ್. ಸಿಂಧ್ಯ : ಐ.ಎಂ.ಸಿ. ರೆಕಗ್‌ನಿಷನ್ ಮಾಡುವುದು ಬೇಡ ಎಂದು ನೀವು ಹೇಳಿ.

ಅಧ್ಯಕ್ಷರು : ಮಾನ್ಯ ಸದಸ್ಯರು ಬಹಳ ಪ್ರಮುಖವಾದ ವಿಚಾರವನ್ನು ಎತ್ತಿದ್ದಾರೆ. ಮುಂದೆ ಹೆಲ್ತ್ ಡಿಪಾರ್ಟ್‌ಮೆಂಟ್‌ನ ಡಿಮ್ಯಾಂಡ್ ಬಂದಾಗ ಇದರ ಬಗ್ಗೆ ಸುಧೀರ್ಘವಾದಂಥ ಚರ್ಚೆ ನಡೆಯಲಿ.

ಬೆಂಗಳೂರಿನಲ್ಲಿರುವ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದಲ್ಲಿ ನಷ್ಟ

2341 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ): ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಯಮಿತದ ಸಂಸ್ಥೆಯ ತಯಾರಿಕೆಯನ್ನು ಖಾಸಗಿ ಕಂಪನಿಯಾಗಿ ಶುರು ಮಾಡಿ ನಂತರದಲ್ಲಿ ಸಾರ್ವಜನಿಕ ಲಿಮಿಟೆಡ್ ಕಂಪನಿಯಾಗಿ ಪರಿವರ್ತಿತವಾದದ್ದು ನಿಜವೇ?

ಆ) ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ಕಂಪನಿಯು ಪಬ್ಲಿಕ್ ಲಿಮಿಟ್ರೆಡ್ ಕಂಪನಿಯಾಗಿ ಪರಿವರ್ತನೆ ಹೊಂದಿದ ನಂತರ ಅದರ ಲಾಭ ನಷ್ಟಗಳ ವಿವರ ಕೊಡುವುದು.

ಇ) ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ಸಂಸ್ಥೆಯ ವಸ್ತುಗಳನ್ನು ಎಂ. ಎಸ್.ಐ.ಎಲ್ ಸಂಸ್ಥೆಯಿಂದ ಮಾರಾಟ ಮಾಡಿದ್ದರಿಂದ ನಷ್ಟ ಅನುಭವಿಸಿರುವುದು ನಿಜವೇ?

ಈ) ಎಂ.ಎಸ್.ಐ.ಎಲ್. ಸಂಸ್ಥೆಯಿಂದ ಮಾರಾಟವನ್ನು ಹಿಂತೆಗೆದುಕೊಂಡ ನಂತರ ಈ ಸಂಸ್ಥೆಯ ಮಾರಾಟದಲ್ಲಿ ಏನಾದರೂ ಸುಧಾರಣೆ ಆಗಿದೆಯೇ?

ಉ) ಈ ಸಂಸ್ಥೆಯು ಅನುಭವಿಸಿದ ನಷ್ಟವನ್ನು ತುಂಬಿಕೊಡಲು ಕೈಗೊಂಡ ಕ್ರಮಗಳೇನು?

ಶ್ರೀಮತಿ ಮನೋರಮಾ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು)

ಅ) ಇಲ್ಲ

ಆ) ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಯಮಿತ ಸಂಸ್ಥೆಯು ಅದರ ಸ್ಥಾಪನೆಯ ವರ್ಷದಿಂದಲೂ ನಷ್ಟ ಅನುಭವಿಸುತ್ತಿದೆ ವಿವರಗಳ ಪಟ್ಟಿಯನ್ನು ಲಗತ್ತಿಸಿದೆ.

ಇ) ಇಲ್ಲ

ಈ) ಇಲ್ಲ

ಉ) ಈ ಸಂಸ್ಥೆಯ ರೂ 11.6 ಕೋಟಿಯ ಪುನರ್ ಸಜ್ಜೀಕರಣ ಪ್ರಸ್ತಾವನೆಯನ್ನು ಒಪ್ಪಿದೆ. ಇದರಿಂದಾಗಿ ಅದರ ಕಾರ್ಯನಿರ್ವಹಣೆಯಲ್ಲಿ ಸುಧಾರಣೆಯಾಗುವುದೆಂದು ಭಾವಿಸಲಾಗಿದೆ.

Year April to March	*Cash loss Rs.*	*Non Cash loss Rs.*	*Total Loss Rs. (Rs. in Lakhs)*
1980-81	(+) 56.8	(-) 135.00	(-) 78.12
1981-82	(+) 61.40	(-) 314.02	(-) 252.12
1982-83	(+)184.96	(-) 278.43	(-) 93.45
1983-84	(-) 29.04	(-) 660.51	(-) 689.55
1984-85	(-) 71.72	(-) 364.79	(-) 441.52
1985-86	(-) 339.79	(-) 369.91	(-) 709.70
1986-87	(-) 321.88	(-) 297.64	(-) 619.51
1987-88	(-) 425.85	(-)314.15	(-) 740.00
1988-89	(-) 671.79	(-) 376.91	(-) 1048.70
1989-90	(-) 808.76	(-) 421.17	(-) 1229.93
1990-91	(-) 973.39	(-) 442.71	(-) 1416.10
Total	**(-) 3338.96**	**(-) 3980.24**	**(-) 7319.20**

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನನ್ನ ಎಲ್ಲ ಪ್ರಶ್ನೆಗಳಿಗೂ ಮಾನ್ಯ ಮಂತ್ರಿಗಳು ಇಲ್ಲ, ಇಲ್ಲ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಈ ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ಕಾರ್ಖಾನೆ ಪ್ರಾರಂಭದಿಂದಲೂ ಸುಮಾರು ೭೩ ಕೋಟಿ ರೂಪಾಯಿಗಳ ನಷ್ಟವನ್ನು ಅನುಭವಿಸಿಕೊಂಡು ಬಂದಿದೆ. ಇನ್ನು ನನ್ನ ಕೊನೇ ಪ್ರಶ್ನೆಗೆ ಉತ್ತರವಾಗಿ 11 ಕೋಟಿ ರೂಪಾಯಿಗಳನ್ನು ರೀಹ್ಯಾಬಿಲಿಟೇಕ್ಷನ್ ಮಾಡುವುದಕ್ಕೆ ಕೊಡುತ್ತೇವೆಂದು ಹೇಳಿದ್ದಾರೆ. ಕೈಗಾರಿಕೆಯ ಬಗ್ಗೆ ನಮಗೂ ಸ್ವಲ್ಪಮಟ್ಟಿಗೆ ಅನುಭವ ಇದೆ. ನೀವು 11 ಕೋಟಿ ರೂಪಾಯಿಗಳನ್ನು ಕೊಟ್ಟು ಈ ಕಾರ್ಖಾನೆಯನ್ನು ಉದ್ಧಾರ ಮಾಡುವುದಕ್ಕಾಗುವುದಿಲ್ಲ. ಈ ಹಣದಿಂದ ಈ ವರ್ಷ ಕೇವಲ ಸಂಬಳವನ್ನು ಕೊಡಬಹುದು ಅಷ್ಟೇ ಅವರ ನಿಧಿಯನ್ನು ತೆಗೆಯದ ರೀತಿಯಲ್ಲಿ ಸಂಬಳ ಕೊಡಬಹುದೇ ಹೊರತು ಬೇರೆ ಏನನ್ನೂ ಮಾಡುವುದಕ್ಕಾಗುವುದಿಲ್ಲ. ಇದೇ ರೀತಿ ನೀವು ಇದನ್ನು ಎಲ್ಲಿಯವರೆಗೆ ತಳ್ಳಿಕೊಂಡು ಹೋಗುತ್ತೀರಿ? ನಾನು ತಮ್ಮನ್ನು ನಿರ್ದಿಷ್ಟವಾಗಿ ಕೇಳುತ್ತೇನೆ. 11 ಕೋಟಿ ರೂಪಾಯಿಗಳನ್ನು ರೀಹ್ಯಾಬಿಲಿಟೇಷನ್‌ಗೋಸ್ಕರ ಹಾಕುವುದರಿಂದ ಈ ಕೈಗಾರಿಕೆಯ ಪರಿಸ್ಥಿತಿ ಸುಧಾರಣೆಯಾಗುತ್ತದೆಯೆ? ನಿಮಗೆ ಇದರಲ್ಲಿ ನಂಬಿಕೆ ಇದ್ದರೆ ಅದಕ್ಕೇನಾದರೂ ಒಂದು ಕಾಂಪ್ರಹೆನ್ಸಿವ್ ಪ್ಲಾನ್‌ನ್ನು ಮಾಡಿದ್ದೀರಾ? ಮಾಡಿದ್ದರೆ ಯಾರು ಮಾಡಿದ್ದಾರೆಂಬುದನ್ನು ತಿಳಿಸಬೇಕು. ಅದು ಅಲ್ಲದಿದ್ದರೆ ಇದನ್ನು ಖಾಸಗಿಯವರಿಗೆ ಏತಕ್ಕೆ ವಹಿಸಿಕೊಡಬಾರದು. ಹಿಂದೆ ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಇದೇ ಸದನದಲ್ಲಿ ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದ್ದರು ಮಾನ್ಯ ಅಧ್ಯಕ್ಷರೇ ತಾವೂ ಕೂಡ ಕೈಗಾರಿಕಾ ಸಚಿವರಾಗಿದ್ದಿರಿ ಎಲ್ಲಿಯವರೆಗೆ ಈ ಕಾರ್ಖಾನೆಗಳಿಗೆ ಬಡವರ ಹಣವನ್ನು ತೆಗೆದುಕೊಂಡು ಹೋಗಿ ಹಾಕಿ ಅನ್ಯಾಯವಾಗಿ ಆ ಬಡವರನ್ನು ಹಾಳುಮಾಡುತ್ತೀರಿ ಇದಕ್ಕೆ ಕಾಯಕಲ್ಪ ಮಾಡಿ ರಾಜಕೀಯ ಸಂಕಲ್ಪವನ್ನು ಮಾಡಿ

ಏನಾದರೂ ಒಂದು ಇತಿಶ್ರೀ ಹಾಡುತ್ತೀರಾ? ದಯವಿಟ್ಟು ನನ್ನ ಪ್ರಶ್ನೆಗೆ ಯೋಚನೆ ಮಾಡಿ ಉತ್ತರ ಕೊಡಿ.

ಶ್ರೀಮತಿ ಮನೋರಮಾ ಮಧ್ವರಾಜ್ : ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಕೇಳಿದಂಥ ಪ್ರಶ್ನೆ ಬಹಳ ಗಹನವಾದುದು. ಈ ನಿಟ್ಟಿನಲ್ಲಿ ರೀ ಹ್ಯಾಬಿಲಿಟೇಷನ್‌ಗೋಸ್ಕರ 11 ಕೋಟಿ ರೂಪಾಯಿಗಳನ್ನು ನಾವು ಅಪ್ರೂವ್ ಮಾಡಿದ್ದು ನಿಜ ಆದರೆ 73 ಕೋಟಿ ರೂಪಾಯಿಗಳ ನಷ್ಟವನ್ನು ಸರಿದೂಗಿಸುವುದು ಕಷ್ಟ ಎಂಬುದು ನಮಗೂ ಗೊತ್ತಿದೆ. ಈ ನಿಟ್ಟಿನಲ್ಲಿ ನಮ್ಮ ರಾಜ್ಯಸರ್ಕಾರ ಸಚಿವ ಸಂಪುಟದ ಒಂದು ಉಪ ಸಮಿತಿಯನ್ನು ನೇಮಕ ಮಾಡಿದೆ ಅದರ ತೀರ್ಮಾನವನ್ನು ನಾವು ಕಾಯುತ್ತಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ : ಈ 11 ಕೋಟಿ ರೂಪಾಯಿಗಳನ್ನು ಹಾಕಿ ಈ ಕಾರ್ಖಾನೆಯನ್ನು ಇಂಪ್ರೂವ್ ಮಾಡುವುದಕ್ಕಾಗುವುದಿಲ್ಲ ಎಂದು ನೀವೇ ಒಪ್ಪಿಕೊಂಡಮೇಲೆ ಮತ್ತೆ ಏತಕ್ಕೆ ಇಷ್ಟು ಹಣವನ್ನು ಇದಕ್ಕೆ ಹಾಕುತ್ತೀರಿ? ಇದರ ಬದಲು ಈ ಹಣವನ್ನು ಯಾವುದಾದರೂ ಕೆರೆ ಕಟ್ಟೆಗಳ ನಿರ್ಮಾಣಕ್ಕೆ ಹಾಕಿ. ಈ ವಿಚಾರವನ್ನು ತಾವು ತಮ್ಮ ಸಚಿವ ಸಂಪುಟದ ಮುಂದೆ ಚರ್ಚೆಮಾಡಿ ಒಂದು ಇತಿಶ್ರೀ ಹಾಡಿ. ನಾವು ರೈತ ಪ್ರತಿನಿಧಿಗಳಾಗಿರುವವರು ಇದನ್ನೆಲ್ಲಾ ಸಹಿಸುವುದಕ್ಕಾಗುವುದಿಲ್ಲ. ಕೇವಲ 500 ಜನ ಕಾರ್ಮಿಕರಿಗೋಸ್ಕರ 73 ಕೋಟಿ ರೂಪಾಯಿಗಳನ್ನು ಲಾಸ್ ಮಾಡಿಕೊಂಡು ಈ ಕಾರ್ಖಾನೆಯನ್ನು ಇಟ್ಟುಕೊಳ್ಳುತ್ತೀರಾ? ಇದಕ್ಕೆ ಎಲ್ಲಿಂದ ದುಡ್ಡನ್ನು ತರುತ್ತೀರಿ? ಇವತ್ತು ಯಾವುದಾದರೂ ಕೆರೆಕಟ್ಟೆಗಳ ನಿರ್ಮಾಣಕ್ಕೆ ಹಣ ಕೊಡಿ ಎಂದರೆ ದುಡ್ಡು ಇಲ್ಲ ಎಂದು ಹೇಳುತ್ತೀರಿ. ಅಂದಮೇಲೆ ಇದರ ಮೇಲೆ ಇಷ್ಟೊಂದು ಹಣವನ್ನು ಹಾಕುತ್ತೀರಿ? ಇದರ ಬಗ್ಗೆ ನಿಮ್ಮ ಒಂದು ಖಚಿತವಾದ ನಿರ್ಧಾರವನ್ನು ಹೇಳಿ ನೀವು ಇದನ್ನು ಖಾಸಗಿಯವರಿಗೆ ವಹಿಸಿದರೆ ಅದಕ್ಕೆ ನಾವು ಆರೋಪವನ್ನು ಮಾಡುವುದಿಲ್ಲ ಏಕೆಂದರೆ ಇದನ್ನು ಉದ್ಧಾರ ಮಾಡುವುದಕ್ಕಾಗುವುದಿಲ್ಲವೆಂದು ಅಂಕಿಅಂಶಗಳಿಂದ ಇದು ಸಾಬೀತಾಗಿದೆ ಇದು ಗೊತ್ತಿದ್ದರೂ 11ಕೋಟಿ ರೂಪಾಯಿಗಳನ್ನು ಇದರಮೇಲೆ ಹಾಕಿ ಏತಕ್ಕೆ ಲಾಸ್ ಮಾಡುತ್ತೀರಿ?

ಶ್ರೀಮತಿ ಮನೋರಮಾ ಮಧ್ವರಾಜ್ : ಈ 11 ಕೋಟಿ ರೂಪಾಯಿಗಳನ್ನು ನಾವು ಕೊಡುವುದಿಲ್ಲ. ಐ.ಡಿ.ಬಿ.ಐ. ನವರು ಕೊಡುತ್ತಾರೆ ಅವರು ರೆಕಮೆಂಡ್ ಮಾಡಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ : ಅದು ಸಾಲ ಅಲ್ಲವೇ? ಅದನ್ನು ರಾಜ್ಯ ಸರ್ಕಾರ ಕೊಡಬೇಕಲ್ಲ

ಶ್ರೀ ಮತಿ ಮನೋರಮಾ ಮಧ್ವರಾಜ್ : ನಾವು ಇದರ ಬಗ್ಗೆ ಒಂದು ಉಪ ಸಮಿತಿಯನ್ನು ರಚನೆ ಮಾಡಿದ್ದೇವೆ. ಅದರಲ್ಲಿ ಏನು ತೀರ್ಮಾನ ಆಗುತ್ತದೆಂದು ನೋಡೋಣ. ಈ ಕಾರ್ಖಾನೆಯನ್ನು ಖಾಸಗಿಯವರಿಗೆ ವಹಿಸಿಕೊಡುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಇದರಲ್ಲಿ ನಾವು ಪಟ್ಟುಹಿಡಿದುಕೊಂಡು ಕುಳಿತುಕೊಳ್ಳುವ ಪ್ರಮೇಯ ಇಲ್ಲ ಮಾನ್ಯ ಸದಸ್ಯರ ಸಲಹೆಗಳನ್ನು ನಾವು ಪರಿಶೀಲಿಸುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ : ಇದೇರೀತಿ ರೋಗಗ್ರಸ್ಥ ಕಾರ್ಖಾನೆಗಳ ಪ್ರಶ್ನೆ ಇನ್ನೂ ಹಲವಾರು ಇವೆ. ಆದ್ದರಿಂದ ಎಷ್ಟು ದಿವಸದಲ್ಲಿ ನಿಮ್ಮ ತೀರ್ಮಾನವನ್ನು ಹೇಳುತ್ತೀರಿ ಎಷ್ಟು ದಿವಸದಲ್ಲಿ ಇದನ್ನು ಮಾಡುತ್ತೀರಿ?

ಶ್ರೀಮತಿ ಮನೋರಮಾ ಮಧ್ವರಾಜ್ : ದಿವಸಗಳನ್ನು ಹೇಳುವುದಕ್ಕಾಗುವುದಿಲ್ಲ

ಅಧ್ಯಕ್ಷರು : ತಿಂಗಳು ಹೇಳುತ್ತೀರಾ? ಅಥವಾ ವರ್ಷ ಹೇಳುತ್ತೀರಾ?

ಪ್ರೊ ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಾದ ಜಯಚಂದ್ರರವರು ಮಾತನಾಡುತ್ತಾ ಈ ಕಾರ್ಖಾನೆಯನ್ನು ಖಾಸಗಿಯವರಿಗೆ ವಹಿಸಿಕೊಡಿ ಎಂದು ಹೇಳಿದರು. ಇಂಥ ಖಾಸಗೀಕರಣ ಬಹಳ ಅಪಾಯದ ಒಂದು ನೀತಿಯಾಗಿದೆ. ನಾವು ಎಲ್ಲಿ ಸೋಲುತ್ತಿದ್ದೇವೆಂಬುದನ್ನು ಗುರ್ತಿಸಿ ಈ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಏನಿದೆ ಇವನ್ನು ಸರಿಪಡಿಸುವುದಕ್ಕೆ ಸಾಧ್ಯ ಇದೆಯೇ? ಕಳೆದ ವರ್ಷ ನಾನು ಯಾವುದೋ ಒಂದು ಸದನದ ಸಮಿತಿಯಲ್ಲಿ ಇದೆ ಅಲ್ಲಿಗೆ ಫಿಷರೀಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್‌ನ ಅಧಿಕಾರಿಗಳು ಬಂದಿದ್ದರು. ತಮ್ಮ ಸಂಸ್ಥೆಗೆ ನಷ್ಟ ಆಗುತ್ತಿದೆ ಎಂದು ಹೇಳಿದರು. ಅದು ಏತಕ್ಕೆ ನಷ್ಟವಾಯಿತು ಎಂದು ಕೇಳಿದರೆ ನಾವು ಹಿಡಿದ ಮೀನುಗಳಿಗೆ ಗಿರಾಕಿಗಳು ಸಿಕ್ಕಲಿಲ್ಲ ಆದ್ದರಿಂದ ಆ ಮೀನುಗಳನ್ನೆಲ್ಲಾ ಮತ್ತೆ ಸಮುದ್ರಕ್ಕೇ ಹಾಕಿದೆವು ಎಂದು ಹೇಳಿದರು. ಹಾಗಾದರೆ ಎಷ್ಟು ಹಾಕಿದಿರಿ ಎಂದರೆ ಅದಕ್ಕೆ ಲೆಕ್ಕವೇ ಇಲ್ಲ ಅಂದರೆ ಈ ರೀತಿ ನಡೆಸಿ ಈ ಫಿಷರಿಸ್ ಡೆವಲಪ್‌ಮೆಂಟ್ ಕಾರ್ಪೋರೇಷನನ್ನು ಖಾಸಗಿಯವರಿಗೆ ವಹಿಸಿಕೊಡೋಣ ಎನತಕ್ಕ ಒಂದು ನೀತಿಗೆ ನೀವು ಬಂದರೆ ಎಂಥ ಕೆಟ್ಟ ಚಾಳಿಯನ್ನು ರಾಜ್ಯದಲ್ಲಿ ನೀವಾಗಿಯೇ ಬೆಳೆಸಿದಂತಾಗುತ್ತದೆಂಬುದನ್ನು ತಾವು ಯೋಚನೆ ಮಾಡಬೇಕು. ಇಲ್ಲಿ ಮೂಲದೋಶವಾಗುತ್ತಿರುವುದು ಏನೆಂದರೆ ನಾವು ಏನು ಉದ್ಯಮಗಳನ್ನು ಇಟ್ಟುಕೊಂಡಿದ್ದೇವೆ ಅದರ ಬಗ್ಗೆ ಜ್ಞಾನವೇ ಇಲ್ಲದಂಥ ಅಧಿಕಾರಿಗಳನ್ನು ನೇಮಕ ಮಾಡುತ್ತಿದ್ದೇವೆ We are apointing bureaucrats who are jacks of all and masters of none. ಐ.ಎ.ಎಸ್. ಅಧಿಕಾರಿಗಳೆಂದರೆ ಅವರನ್ನು ಬೃಹಸ್ಪತಿಗಳೆಂದು ತಿಳಿದುಕೊಂಡಿದ್ದೇವೆ. ಅವರಿಗೆ ಅವರು ಬೃಹಸ್ಪತಿಗಳಲ್ಲವೆಂದು ಅವರಿಗೂ ಗೊತ್ತು ಆದರೂ ಪದ್ಧತಿಯಲ್ಲಿ ಬರುತ್ತಾರೆ ಒಂದು ವರ್ಷ ಎರಡು ವರ್ಷ ಇರುತ್ತಾರೆ ಮಾಡಬಾರದ ಅವ್ಯವಹಾರಗಳನ್ನೆಲ್ಲ ಮಾಡುತ್ತಾರೆ. ಅದಕ್ಕೆ ಆಡಿಟ್ ರಿಪೋರ್ಟ್ ಇಲ್ಲ ಅನ್ಯುಯಲ್ ರಿಪೋರ್ಟ್ ಇಲ್ಲ ಇನ್ನೊಂದು ಇಲಾಖೆಗೆ ಹೋಗುತ್ತಾರೆ. We have not fixed accountability also. Why not you take a decision to appoint technocrats for a long period and fix accountability so that public undertakings don't fall sick? They don't fall sick acutally. ಅಲ್ಲಿ ನಿರ್ದೇಶಕರು ಮ್ಯಾನೇಜಿಂಗ್ ಡೈರೆಕ್ಟರ್ ಚೇರ್‌ಮೆನ್ ಎಂದು ಯಾರನ್ನು ನೇಮಕ ಮಾಡುತ್ತೀರೋ ಅವರು ಬಹಳ ಆರೋಗ್ಯವಂತರಾಗಿ ಓಡಾಡುತ್ತಾರೆ ಆದರೆ ಆ ಸಂಸ್ಥೆಗಳಿಗೆ ಕಾಯಿಲೆ ಬರಿಸಿ ಹೊರಗೆ ಹೋಗುತ್ತಾರೆ. ಇದರ ಬಗ್ಗೆ ಆಲೋಚನೆ ಮಾಡಿ. ಈರೀತಿ ಖಾಸಗೀಕರಣವನ್ನು ಮಾನ್ಯ ಸದಸ್ಯರು ಸಲಹೆ ಮಾಡಬಾರದು ತಾವು ಅದನ್ನು ಸ್ವೀಕರಿಸಬಾರದು. ಅದನ್ನು ರಿಪೇರಿ ಮಾಡುವುದಕ್ಕೆ ಏನಾದರೂ ಯೋಚನೆ ಮಾಡುತ್ತಿರಾ?

ಶ್ರೀಮತಿ ಮನೋರಮ ಮಧ್ವರಾಜ್ : ಮಾನ್ಯ ನಂಜುಂಡಸ್ವಾಮಿಯವರು ಅತ್ಯುತ್ತಮವಾದ ಸಲಹೆಯನ್ನು ಕೊಟ್ಟಿದ್ದಾರೆ ನಾವು ಇದನ್ನು ಪರಿಶೀಲಿರಿ ಇದಕ್ಕೆ ಯೋಗ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆನ್ನುವ ಆಶ್ವಾಸನೆಯನ್ನು ಕೊಡುತ್ತೇನೆ.

ಅಧ್ಯಕ್ಷರು : ನೀವು ಅವರ ಸಲಹೆಯನ್ನು ಯೋಗ್ಯವಾಗಿದೆ ಎಂದು ಹೇಳಿದಿರಿ ಇವರ ಸಲಹೆಯನ್ನು ಯೋಗ್ಯವಾಗಿದೆ ಎಂದು ಹೇಳಿದಿರಿ ಎನೇ ಇರಲಿ ಈ ಎರಡು ಸಲಹೆಗಳನ್ನು ಉಪಸಮಿತಿಯ ಮುಂದೆ ಇಡುತ್ತೀರಾ?

ಶ್ರೀಮತಿ ಮನೋರಮ ಮಧ್ವರಾಜ್ : ಯಾವುದು ಒಳ್ಳೆಯದೆನ್ನುವ ಬಗ್ಗೆ ಉಪಸಮಿತಿಯ ಮುಂದಿಟ್ಟು ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ ಸರ್ಕಾರದ ತೀರ್ಮಾನ ಏನು ಎಂದು ನನಗೆ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು : ಅವರು ಇನ್ನೂ ತೀರ್ಮಾನ ಮಾಡಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಖಾಸಗೀಕರಣಕ್ಕೆ ನಾವು ಸಂಪೂರ್ಣವಾಗಿ ವಿರೋಧವಾಗಿದ್ದೇವೆ.

ಅಧ್ಯಕ್ಷರು : ವಾಟಾಳ್ ನಾಗರಾಜ್‌ರವರೇ ನಿಮ್ಮದು ಸಣ್ಣ ಪ್ರಮಾಣದ ಕೈಗಾರಿಕೆಗಳ ಪ್ರಶ್ನೆ ಇದೆ ಅದನ್ನು ಕೇಳಿ

ಶ್ರೀ ಎಲ್.ಆರ್. ಶಿವರಾಮೇಗೌಡ . ಇದು ಬಹಳ ಮುಖ್ಯವಾದ ಪ್ರಶ್ನೆ.

ಅಧ್ಯಕ್ಷರು : ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ನ ಡಿಮ್ಯಾಂಡ್ ಬರುತ್ತದೆ ಆಗ ಮಾತನಾಡಿ

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಅಧ್ಯಕ್ಷರೇ, ದಯವಿಟ್ಟು ನಮ್ಮ ರಕ್ಷಣೆಗೆ ಬರಬೇಕು.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ ಸಾಬೂನು ಕಾರ್ಖಾನೆಯ ವಿಚಾರ ಬಹಳ ಮುಖ್ಯವಾದ ವಿಚಾರ. ಇದರ ಬಗ್ಗೆ ಒಂದು ಸಮಿತಿ ರಚನೆಯಾಗಿದೆ. ಆ ಸಮಿತಿಯಲ್ಲಿ ಏನು ವಿಷಯ ಹೊರಗೆ ಬಂದಿದೆ ಯಾರನ್ನು ಜವಾಬ್ದಾರಿ ಮಾಡಿದ್ದಾರೆ ಅದನ್ನೆಲ್ಲ ಹೇಳಬೇಕು. ಸಾಬೂನೂ ಕಾರ್ಖಾನೆಯ ವಿಚಾರದಲ್ಲಿ ಹಿಂದೆ ತನಿಖೆಯಾಗಿದೆ. ಅದರಲ್ಲಿ ದೊಡ್ಡ ಅವ್ಯವಹಾರವೇ ನಡೆದಿದೆ ಎಂದು ಆರೋಪ ಇತ್ತು. ಆ ತನಿಖೆಯ ವರದಿ ಬಂದಿದೆಯೇ? ಬಂದಿದ್ದರೆ ಯಾರನ್ನು ಆರೋಪಿಗಳನ್ನಾಗಿ ಮಾಡಿದೆ? ಅಂಥವರ ಮೇಲೆ ತೆಗೆದುಕೊಂಡ ಕ್ರಮ ಏನು?

ಶ್ರೀಮತಿ ಮನೋರಮ ಮಧ್ವರಾಜ್ : ಅದಕ್ಕೆ ಬೇರೆ ಪ್ರಶ್ನೆಯನ್ನು ಹಾಕಿದರೆ ಉತ್ತರ ಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ : "ಮಾನ್ಯ ಅಧ್ಯಕ್ಷರೇ ಇದು ನಷ್ಟಕ್ಕೆ ಸಂಬಂಧಪಟ್ಟಿರತಕ್ಕಂಥ ಪ್ರಶ್ನೆ 70 ಕೋಟಿ ರೂಪಾಯಿ ನಷ್ಟವಾಗಿದೆ ಎಂದರೆ ಅದಕ್ಕೆ ಬೇರೆ ಪ್ರಶ್ನೆಯನ್ನು ಹಾಕಿ ಎಂದರೆ ಸಾಧ್ಯವಿಲ್ಲ ದಯವಿಟ್ಟು ತಾವು ಆಲೋಚನೆ ಮಾಡಿ.

ಅಧ್ಯಕ್ಷರು : ಆಲೋಚನೆ ಮಾಡಿ ಎಂದು ಹೇಳುತ್ತಿದ್ದೀರಿ ಆಲೋಚನೆ ಮಾಡುವುದಕ್ಕೆ ನನಗೆ ಟೈಮ್ ಕೊಡಿ. ಎಷ್ಟು ನಷ್ಟವಾಗಿದೆ ಎಂದು ಪ್ರಶ್ನೆ ಇದೆ. ಇದರಲ್ಲಿ ಅವ್ಯವಹಾರಗಳು ನಡೆದಿದೆ ಎಂದರೆ.....

ಶ್ರೀ ಸಿ ಬೈರೇಗೌಡ : ನಷ್ಟವಾಗಬೇಕಾದರೆ ಅವ್ಯವಹಾರವೇ ಕಾರಣ

ಅಧ್ಯಕ್ಷರು : ಅಷ್ಟೇನಾ ಶಿವರಾಮೇಗೌಡರೇ

ಶ್ರೀ ಎಲ್.ಆರ್. ಶಿವರಾಮೇಗೌಡ : ಅವ್ಯವಹಾರ ನಡೆದಿದೆ ಎಂದು ಸಾಬೀತಾಗಿದೆ. ಅದು ಏನಾಗಿದೆ ಎಂಬುದನ್ನು ಸಭೆಯ ಮುಂದಿಡಬೇಕು.

ಶ್ರೀ ಸಿ. ಬೈರೇಗೌಡ : ನಮ್ಮ ಅಧಿಕಾರಿಗಳು ಏನು ಮಾಡುತ್ತಾರೆಂದರೆ ಹಿಂದೆ ಒಂದು ಸಾರಿ ನಾನು ಹೇಳಿದ್ದೆ ಹಚ್ಚಗಿರುವಕಡೆ ಮೇಯುವುದು ಬೆಚ್ಚಗಿರುವ ಕಡೆ ಮಲಗುವುದು ಎಂದು ಹಳಿದ್ದೆ ಆ ವ್ಯವಹಾರ ಮಾಡಿದ್ದರಿಂದಲೇ ಇವತ್ತು 70 ಕೋಟಿ ರೂಪಾಯಿ ಚಿಲ್ಲರೆ ನಷ್ಟವಾಗಿರುವುದು. ಅದರ ಬಗ್ಗೆ ತನಿಖೆಯಾಗಿದೆ. ಈ

ರೀತಿ ನಷ್ಟವಾಗಬೇಕಾದರೆ ಏನು ಕಾರಣ ಎನ್ನುವುದನ್ನು ಈ ಸದನಕ್ಕೆ ಈ ರಾಜ್ಯದ ಜನತೆಗೆ ತಿಳಿಸಬೇಕಾಗಿರತಕ್ಕಂಥದ್ದು ಸರ್ಕಾರದ ಕರ್ತವ್ಯ ನನಗಂತೂ ಗೊತ್ತಿಲ್ಲ.

ಶ್ರೀಮತಿ ಮನೋರಮ ಮಧ್ವರಾಜ್ : ಅದು ನನ್ನ ಗಮನಕ್ಕೆ ಇಲ್ಲಿಯತನಕ ಬಂದಿಲ್ಲ. ತಪ್ಪಿತಸ್ಥರು ಎಂದು ಕಂಡುಬಂದಲ್ಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಖಂಡಿತವಾಗಿಯೂ ಹಿಂಜರಿಯುವುದಿಲ್ಲವೆಂದು ಈ ಸಭೆಗೆ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ಒಂದು ಕಾಲದಲ್ಲಿ ಮೈಸೂರು ಗಂಧ ಮೈಸೂರು ಸ್ಯಾಂಡಲ್ ಸೋಪ್ ವಿಶ್ವವಿಖ್ಯಾತವಾಗಿತ್ತು. ಇವತ್ತು ಇದು ಸಂಪೂರ್ಣವಾಗಿ ಹಾಳಾಗಿಹೋಗಿದೆ. ನಮ್ಮಲ್ಲಿ ಗಂಧ ಬೆಳೆಯುತ್ತೇವೆ ಆದರೆ ನಮ್ಮಲ್ಲಿ ಕಾರ್ಖಾನೆ ಬೆಳೆವಣಿಗೆಯಾಗುತ್ತಿಲ್ಲ ಗಂಧ ಬೆಳೆಯದಿರತಕ್ಕಂಥ ಅಮೇಧಿಯಲ್ಲಿ ಗಂಧದ ಕಾರ್ಖಾನೆ ಬಹಳ ಸುಲಲಿತವಾಗಿ ಬೆಳೆಯುತ್ತಿದೆ. ಇದಕ್ಕೆ ಏನು ಕಾರಣ? ಏನು ಕಾಯಕಲ್ಪ ಕೊಡಬೇಕೆಂದಿದ್ದೀರಿ? ಖಾಸಗೀಕರಣ ಮಾಡತಕ್ಕದ್ದು ಸರ್ಕಾರದ ನಿರ್ಧಾರ ಅಲ್ಲ ಇದನ್ನು ಬೆಳಸಕ್ಕದ್ದಕ್ಕೆ ಮತ್ತು ಉಳಿಸತಕ್ಕದ್ದಕ್ಕೆ ಏನು ಯೋಜನೆ ಹಾಕಿಕೊಂಡಿದ್ದೀರಾ?

ಶ್ರೀಮತಿ ಮನೋರಮಾ ಮಧ್ವರಾಜ್ : ಇದಕ್ಕೆ ನನಗೆ ಸಮಯ ಬೇಕು.

ಚಾಮರಾಜನಗರದಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಪ್ರೋತ್ಸಾಹ

2385 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಸಣ್ಣ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಚಾಮರಾಜನಗರವು ಗಡಿ ಪ್ರದೇಶವಾಗಿದ್ದು ಅಲ್ಲಿ ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಿ ಅಭಿವೃದ್ಧಿ ಪಡಿಸುವ ಸಲುವಾಗಿ ಸರ್ಕಾರ ಯಾವುದಾದರೂ ಕ್ರಮಗಳನ್ನು ರೂಪಿಸಿದೆಯೇ?

ಆ) ರೂಪಿಸಿದ್ದಲ್ಲಿ ಆ ಕಾರ್ಯಕ್ರಮಗಳು ಯಾವುವು?

ಇ) ಕಳೆದ 5 ವರ್ಷಗಳಲ್ಲಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗಾಗಿ ಸರ್ಕಾರ ಎಷ್ಟು ಹಣ ಖರ್ಚು ಮಾಡಿದೆ?

ಈ) ಯಾವ ಯಾವ ಕೈಗಾರಿಕೆಗಳಿಗೆ ಎಷ್ಟು ಹಣ ಖರ್ಚು ಮಾಡಲಾಗಿದೆ ಮತ್ತು ಇತರ ಲಾಭ ಪಡೆದ ಫಲಾನುಭವಿಗಳ ವಿವರಗಳನ್ನು ಒದಗಿಸುವುದು?

ಶ್ರೀ ನಸೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು):

ಅ) ಸರ್ಕಾರಿ ಆದೇಶ ಸಂಖ್ಯೆ. ಸಿ.ಐ. 138 ಎಸ್.ಪಿ.ಸಿ. 90 ದಿನಾಂಕ 27-9-90 ರಲ್ಲಿ ಪರಿಷ್ಕೃತ ಕೈಗಾರಿಕಾ ಪ್ರೋತ್ಸಾಹ ಕ್ರಮಗಳು ಹಾಗೂ ರಿಯಾಯಿತಿಗಳನ್ನು ದಿನಾಂಕ 1-10-90ರಿಂದ ಜಾರಿಗೆ ಬರುವಂತೆ ಘೋಷಿಸಲಾಗಿದೆ. ಈ ಆದೇಶದಲ್ಲಿ ಚಾಮರಾಜನಗರ ತಾಲ್ಲೂಕನ್ನು ಕೈಗಾರಿಕೆಯಲ್ಲಿ ಹಿಂದುಳಿದ ಮೂರನೇ ವಲಯ ತಾಲ್ಲೂಕೆಂದು ಘೋಷಿಸಲಾಗಿದೆ.

ಆ) ಕೈಗಾರಿಕೆಯಲ್ಲಿ ಹಿಂದುಳಿದ ಮೂರನೇ ವಲಯವೆಂದು ಘೋಷಿಸಿದ ಕಾರಣ, ಈ ತಾಲ್ಲೂಕಿನಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸುವ ಉದ್ಯಮಿಗಳಿಗೆ ಶೇ 20 ರಷ್ಟು ಸಹಾಯಧನ ಮೊದಲ ನಾಲ್ಕು ವರ್ಷಗಳ ವಾಣಿಜ್ಯ ತೆರಿಗೆ ಏನಾಯಿತಿ ಸ್ಟಾಂಪ್ ಶುಲ್ಕ ರಿಯಾಯಿತಿ ಹಾಗೂ ಭೂ ಪರಿವರ್ತನಾ ಶುಲ್ಕರಿಯಾಯಿತಿಯನ್ನು ನೀಡಲಾಗುತ್ತಿದೆ.